

ಈ ದಂಪತಿಗಳನ್ನು ನೋಡಿದರೆ ಹೊಸದಾಗಿ ವಿವಾಹವಾದವರಂತೆ ಭಾಸವಾಗುತ್ತಾರೆ. ಅಪರೂಪದ ಜೋಡಿ ಅಲ್ಲದಿದ್ದರೂ ಅನುರೂಪದ ಜೋಡಿ ಎನ್ನಲಡ್ಡಿಯಿಲ್ಲ. ವರ್ಷದ ಹಿಂದಿರಬಹುದೇನೋ ಬಾಡಿಗೆ ಮನೆಗೆ ಬಂದು ಸೇರಿಕೊಂಡ ಜೋಡಿ, ಅಕ್ಕಪಕ್ಕದ ಯಾರನ್ನೂ ಹಚ್ಚಿಕೊಂಡವರಲ್ಲ. ಸಿಟಿಗಳಲ್ಲಿ ಇದು ಸಾಮಾನ್ಯ. ತಾವಾಯಿತು ತಮ್ಮ ಪಾಡಾಯಿತೆಂಬಂತೆ ಉಂಡೋ ಉಪವಾಸವೋ ದಿನದೂಡುವ ಅದೆಷ್ಟೋ ಮಂದಿ ಬಗ್ಗೆ ಎಲ್ಲರಿಗೂ ಕುತೂಹಲವಿಲ್ಲದ್ದರಿಂದಲೋ ಏನೋ ಇಲ್ಲಿನ ಜನ ಒಂದಿಷ್ಟು ಹ್ಯಾಪಿಯಾಗಿದ್ದಾರೆನಿಸುತ್ತದೆ. ಬಾಡಿಗೆ ಮನೆಗೆ ಬಂದು ಆರೇಳು ತಿಂಗಳಾದರೂ ಯಾರೊಂದಿಗೂ ಮುಖ ಕೊಟ್ಟು ಮಾತನಾಡದ ನವ ದಂಪತಿಗಳ ಬಗ್ಗೆಯೂ ಯಾರಿಗೂ ಅಂತಹ ತರದೂದೇನಿಲ್ಲವಾದರೂ, ವರ್ಷವಾಗುತ್ತಾ ಬಂದರೂ ಇಬ್ಬರೇ ವಾಸವಾಗಿರುವ ಈ ಜೋಡಿಯನ್ನು ಯಾರೊಬ್ಬರೂ ನೋಡಲು ಬಾರದೆ ಇರುವ ಕಾರಣದಿಂದಾಗಿ ವಠಾರದ ಗಮನವನ್ನು ಸೆಳೆದರು. ಯಾರೂ ನೋಡಲು ಬಾರದೆ ಎಂದರೆ ಅವನ ಮನೆಯವರಾಗಲಿ ಇವಳ ಕಡೆಯವರಾಗಲಿ ಇತ್ತ ಹಾಯಲಿಲ್ಲವಲ್ಲ! ಹೀಗಾಗಿ ಓಡಿ ಬಂದು ಲಗ್ನವಾದರೆ? ದಿಕ್ಕಿಲ್ಲದವರಂತೆ ಬಾಳೋದು ಎಂದರೆ ಹಿರಿಯರು ಒಪ್ಪದೇ ತಾವೇ ಮೆಚ್ಚಿ ಮದುವೆಯಾದವರೆಂಬುದು ಲೋಕಾನುಭವ. ಆದರೂ ದಂಪತಿಗಳೆಂದೂ ಜಗಳವಾಡದೆ ಮುನಿಯದೆ ಸೋತೆವೆಂದೂ ತೋರಗೊಡದೆ ಸಂಸಾರ ನಡೆಸುತ್ತಿರುವುದರಿಂದಾಗಿ ವಠಾರದ ಹಿರಿಯರ ಮೆಚ್ಚುಗೆಯ ನೋಟಕ್ಕೂ ಪಾತ್ರರಾದರು.

ಮೊದಲಿಗೆ, ಮನೆಯ ಮುಂದೆ ಕ್ಯಾಬ್ ನಿಲ್ಲುತ್ತಿದ್ದರಿಂದ ಹುಡುಗ ಡ್ರೈವರ್‌ನೆಂದು ಪತ್ತೆಯಾಯಿತು. ದಿನಗಳೆದಂತೆ ಅವನೊಂದು ಸ್ಕೂಲಿನ ಮಕ್ಕಳನ್ನು ನಿತ್ಯ ಮನೆಗಳಿಂದ ಸ್ಕೂಲಿಗೆ ಕರೆದೊಯ್ಯುವುದು ಮನೆಗೆ ತಲುಪಿಸುವ ಕಾಯಕದವನೆಂದೂ ಗೊತ್ತಾಯಿತು. ಒಂದೆರಡು ತಿಂಗಳುಗಳ ತರುವಾಯ ಆ ಹುಡುಗಿಯೂ ಮನೆಯಲ್ಲಿರದೆ ಮನೆಯು ಬೀಗ ತಗಲಿಸಿಕೊಂಡಾಗ ಅವನನ್ನು ಬಿಟ್ಟು ಯಾವನ ಜೊತೆಯೋ ಓಡಿ ಹೋದಳೋ, ಡ್ರೈವರ್‌ನ ಜೊತೆಗೆ ಪುಟ್ಟ ಮನೆಯಲ್ಲಿರಲಾರದೆ, ಬೀದಿ ನಲ್ಲಿ ನೀರು ಹಿಡಿಯಲಾಗದೆ, ರೇಷನ್ ಹೊಂದಿಸಲಾರದೆ ನಂಬಿ ಬಂದವನ ಬಡತನಕ್ಕೆ ಅಂಜಿ ಕನಸು ಭಗ್ನವಾಗಿ ತವರಿಗೆ ಓಟ ಕಿತ್ತಳೋ ಎಂಬ ಗುಮಾನಿಗೆ ಒಳಗಾದರು. ವಠಾರದ ನಾನಾ ನಮೂನೆ ಊಹೆಗಳಲ್ಲಿ ಅವರು ಪ್ರೇಮಿಸಿ ಮದುವೆಯಾದವರೆಂಬುದಂತೂ ನಿಜವಾಗಿತ್ತು. ಅವರಿಬ್ಬರೂ ತಾವೇಕೆ ಪ್ರೀತಿಸಿದರೋ ಈವತ್ತಿಗೆ ಅವರಿಗೂ ಯಕ್ಷಪ್ರಶ್ನೆ. ಹುಡುಗಿ ಜ್ಯೋತಿ ಹೆಸರಿಗೆ ತಕ್ಕ ಹಾಗೆ ಉರಿವ ಹರೆಯದ ಬಟ್ಟಲ ಕಂಗಳ ಯುವತಿ. ಅವಳೂ ಅವಳಂತೆ ಹಲವರು ಹಳ್ಳಿಗಳಿಂದ ಪಟ್ಟಣಕ್ಕೆ ಹೋಗಿ ಕಾಲೇಜು ಓದಬೇಕಿತ್ತು. ಕಾಲೇಜಿನ ವೇಳೆಗೆ ಸರಿಯಾಗಿ ಬಸ್ಸುಗಳಿಲ್ಲ. ಹೀಗಾಗಿ ದಿನಾ ಹಳ್ಳಿಗಳ ಮೇಲೆ ಓಡಾಡುವ ಕ್ಯಾಬ್‌ನ ಹುಡುಗ ಯಶವಂತ, ಗೌಡರ ಗಮನ ಸೆಳೆದ. ಪಕ್ಕದ ಹಳ್ಳಿಯ ಹುಡುಗ ಯಶವಂತನ ಅಜ್ಜಿ ಪರಿಚಿತಳೇ ಆಗಿದ್ದು, ಹುಡುಗ ಯಶವಂತನೂ ಯಾವುದೇ ದುಶ್ಚಟಗಳಿಲ್ಲದೆ ಪುಂಡ ಪೋಕರಿಯಂತೆ ಅಲೆದಾಡದೆ ದುಡಿದು ತಿನ್ನುವವನೆಂದು ಖಾತರಿಯಾಗುತ್ತಲೇ ಕರೆದು ಮಾತನಾಡಿದರು. ತಮ್ಮ ಮಗಳೊಬ್ಬಳಿಗಾಗಿ ಕಾಲೇಜಿನ ವೇಳೆಗೆ ಅಡ್ಜಸ್ಟ್ ಆಗೋದು ಫಜೀತಿಯಾಗುವುದೆಂದು ಅವನೆಂದಾಗ, ಬೇರೆಯವರ ಬಳಿಯೂ ಮಾತನಾಡಿ ಐದಾರು ಹುಡುಗಿಯರನ್ನೂ ಮಗಳೊಂದಿಗೆ ಜೊತೆ ಮಾಡಿದರು ಗೌಡ.

‘ಉಳಿದ ವೇಳೆಯಲ್ಲಿ ಕ್ಯಾಬ್ ಎಲ್ಲಿಗಾದರೂ ಓಡಿಸು. ಮಕ್ಕಳ ಓದಿಗೆ ತೊಂದರೆಯಾಗದಂತೆ ಬಂದು ಕರೆದೊಯ್ದು ತಂದು ಮನೆಗೆ ಬಿಡು’ ಎನ್ನುವ ಜವಾಬ್ದಾರಿಯನ್ನು ಅವನಿಗೆ ಫಿಕ್ಸ್ ಮಾಡಿದರಲ್ಲದೆ, ಅವನು ಕೇಳಿದ ಮಜೂರಿಗೆ ತಥಾಸ್ತು ಅಂದರು. ಹುಡುಗಿಯರ ಜೊತೆಗೆ ಅಲ್ಲಲ್ಲಿ ಕೈ ತೋರಿಸಿದ ಪ್ಯಾಸೆಂಜರ್‌ಗಳನ್ನೂ ಹತ್ತಿಸಿಕೊಳ್ಳುವಾಗ ಹುಡುಗಿಯರು ತಕರಾರು ತೆಗೆದರು. ‘ಪಾಪಿ ಪೇಟ್ ಕಾ ಸವಾಲ್’ ಎಂದು ಅವನು ಹುಲ್ಲುಗಿಂಜುವಾಗ ಅವರೂ ಸಹಾಯಕರೆ. ಗೌಡರ ಮಗಳೇ ಗೋಣು ಆಡಿಸಿ, ‘ಬಡವ ಬದುಕ್ಕೊಳ್ಳಿ ಬಿಡ್ರೆ’ ಅಂದಾಗ ಉಳಿದವರೂ ತೆಪ್ಪಗಾದರು. ಯಶವಂತ ಕೂಡ ಹುಡುಗಿಯರಿಗೆ ತ್ರಾಸಾಗದಂತೆ ಪ್ಯಾಸೆಂಜರರ್ಸ್ ಹತ್ತಿಸಿಕೊಳ್ಳುತ್ತಿದ್ದನಲ್ಲದೆ, ಪೋಲಿ ಪಟಾಲಮ್ಮುಗಳು ಕೈ ತೋರಿಸಿದರೆ ನಿಲ್ಲುಸುತ್ತಿರಲಿಲ್ಲವಾಗಿ ಹುಡುಗಿಯರೂ ಪ್ರಸನ್ನವದನರಾದರು. ಯಶವಂತನು ಪಟ್ಟಣಕ್ಕೆ ಹೋಗಿಬರುವಾಗ ಗುನುಗುತ್ತಿದ್ದ ಹಿಂದಿ ಹಾಡುಗಳಿಂದ ಹುಡುಗಿಯರ ಗಮನ ಸೆಳೆದನಲ್ಲದೆ, ಜೀನ್ಸ್ ಪ್ಯಾಂಟು ಜರ್ಕಿನ್ ವೇಷದಲ್ಲಿ ಜಟಕಾ ಇಂಗ್ಲಿಷ್ ಬಿಡುತ್ತಾ ಜೋಕ್ ಹಾರಿಸುತ್ತಾ ಪ್ರಯಾಣ ಹಾಯೆನಿಸಲೂ ಕಾರಣನಾದ. ಒಂದು ದಿನ ಜ್ಯೋತಿ ‘ನೀನೇನು ಓದಿದ್ದೀಯೋ ಯಶವಂತ’ ಎಂದು ಕೊಶ್ಚನಿಟ್ಟಳು. ‘ಡಿಗ್ರಿಯಾಗಿದೆ. ಸರ್ಕಾರಿ ನೌಕರಿ ತಲಾಷ್‌ನಲ್ಲಿದ್ದೇನೆ. ಸಿಕ್ಕಿಬಿಟ್ಟರೆ ಈ ಕ್ಯಾಬ್ಬೂ ನಿಮ್ಗೂ ದೊಡ್ಡ ಸಲಾಮೂ’ ಅಂದು ವಾರೆನಗೆ ಬೀರಿದ್ದ. ಪೋಲಿ ಅಡ್ಡಾಡದೆ